RNU AIR DHARWAD

APRIL 08, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು

<><><>

- ಇಂದಿನಿಂದ 15 ದಿನಗಳ ವರೆಗೆ, 'ಪೋಷಣ್ ಪಖ್ವಾಡಾ'; ರಾಜ್ಯಾದ್ಯಂತ ಆರೋಗ್ಯ ಜಾಗ್ರತಿ ಆಂದೋಲನ.
- ರಾಜ್ಯದ 215 ಕೈಗಾರಿಕಾ ಪ್ರದೇಶಗಳ ಮಾಲಿನ್ಯ ತಗ್ಗಿಸಲು, ಉನ್ನತ ಸಂಸ್ಥೆಗಳಿಂದ ವಿಸ್ತೃತ ಅಧ್ಯಯನ – ಎಂ.ಬಿ.ಪಾಟೀಲ.
- ಪ್ರಧಾನಮಂತ್ರಿ ಮುದ್ರಾ ಸಾಲ ಯೋಜನೆ ಜಾರಿಗೊಂಡು, 10 ವರ್ಷಗಳು ಪೂರ್ಣ.
- ಇಂದು ಮಧ್ಯಾಹ್ನ 12.30ಕ್ಕೆ, ದ್ವಿತೀಯ ಪಿ.ಯು.ಸಿ. ಫಲಿತಾಂಶ, ಪ್ರಕಟ.

<><><>

ಈಗ ವಾರ್ತೆಗಳ ವಿವರ

<><><>

'ಕಿಲ್ಕಾರಿ' ಆಪ್, ಮೊಬೈಲ್ ಹಾಗೂ ಸಾಮಾಜಿಕ ಮಾಧ್ಯಮಗಳ ಮೂಲಕ, ತಾಯಂದಿರಿಗೆ, ಉಚಿತವಾಗಿ ಅವಶ್ಯಕ ಆರೋಗ್ಯ ಸೇವೆಗಳ ಬಗ್ಗೆ, ಮಾಹಿತಿ ಒದಗಿಸುವ ವ್ಯವಸ್ಥೆ. ಇಂದಿನಿಂದ 23ನೇ ತಾರೀಖಿನ ವರೆಗೆ, 15 ದಿನಗಳ ಪೋಷಣ್ ಪಖ್ವಾಡಾ ರಾಜ್ಯಾದ್ಯಂತ ಜರುಗಲಿದೆ. ಆರೋಗ್ಯ ಸಖಿಯರು, ಕಿಲ್ಕಾರಿ ಆಪ್ ಬಗ್ಗೆ ಸಹ, ತಾಯಂದಿರಿಗೆ ಮಾಹಿತಿ ನೀಡಲಿದ್ದಾರೆ.

<><><>

ಹಾವೇರಿ ಜಿಲ್ಲೆ, ಆರೋಗ್ಯಾಧಿಕಾರಿ ಡಾಕ್ಟರ್ ರಾಜೇಶ ಸುರಗಿಹಳ್ಳಿ, ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ಡಾ. ರಾಜೇಶ ಸುರಗಿಹಳ್ಳಿ ಧ್ವನಿ 50 ಸೆಕೆಂದುಗಳು

<><><>

ರಾಜ್ಯದ ಎಲ್ಲ, 215 ಕೈಗಾರಿಕಾ ಪ್ರದೇಶಗಳ ಮಾಲಿನ್ಯ ತಗ್ಗಿಸಲು, ಭಾರತೀಯ ವಿಜ್ಞಾನ ಸಂಸ್ಥೆ, ಭಾರತೀಯ ತಂತ್ರಜ್ಞಾನ ಸಂಸ್ಥೆಗಳಂತಹ, ಉನ್ನತ ಮಟ್ಟದ ಸಂಸ್ಥೆಗಳಿಂದ ವಿಸ್ತೃತ ಅಧ್ಯಯನ ನಡೆಸಿ, ಸೂಕ್ತ ಕ್ರಮ ಕೈಗೊಳ್ಳುವಂತೆ, ಕೈಗಾರಿಕೆ ಖಾತೆ ಸಚಿವ ಎಂ.ಬಿ.ಪಾಟೀಲ, ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಬೆಂಗಳೂರಿನಲ್ಲಿ ಅವರು, ಸಭೆ ನಡೆಸಿದರು. ತಜ್ಞರ ಅಧ್ಯಯನ ತಂಡಗಳು, ರಾಜ್ಯದ ಎಲ್ಲ ಕೈಗಾರಿಕಾ ಪ್ರದೇಶಗಳಿಗೆ ಭೇಟಿ ನೀಡಿ, ಮಾಲಿನ್ಯದ ತೀವ್ರತೆಯನ್ನು ಅಭ್ಯಸಿಸಿ, ಸೂಕ್ತ ಪರಿಹಾರ ಕ್ರಮಗಳನ್ನು ಶಿಫಾರಸು ಮಾಡಲಿವೆ. ಕಾಲಮಿತಿಯೊಳಗೆ ವರದಿ ಪಡೆದು, ಪರಿಸರ ಸಂರಕ್ಷಣೆಗೆ ಆದ್ಯತೆ ನೀಡಲಾಗುವುದು ಎಂದು, ಸಚಿವರು ತಿಳಿಸಿದರು.

<><><>

ಶಿವಮೊಗ್ಗ ಜಿಲ್ಲೆ ಸೊರಬ ತಾಲೂಕಿನಲ್ಲಿ, ಸಾವಿರದ 300 ಕೆರೆಗಳ ಪುನರುಜ್ಜೀವನಕ್ಕೆ, ಮಹಾತ್ಮ ಗಾಂಧಿ ನರೇಗಾ ಯೋಜನೆ ಸಂಜೀವಿನಿಯಾಗಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಹೇಳಿದ್ದಾರೆ. ಉದ್ಯೋಗ ಖಾತ್ರಿ ಯೋಜನೆಯಡಿ, ಸೊರಬ ತಾಲೂಕು ಹುರುಳಿ ಗ್ರಾಮದ, ಸರ್ಕಾರಿ ಶಾಲೆಗೆ, ನೂತನ ಕಾಂಪೌಂಡ್ ಮತ್ತು ಅಡುಗೆ ಕೋಣೆ ನಿರ್ಮಾಣ ಕಾಮಗಾರಿಗೆ, ಯೋಜನಾ ಖಾತೆ ಸಚಿವ ಡಿ. ಸುಧಾಕರ್ ಅವರೊಂದಿಗೆ ಚಾಲನೆ ನೀಡಿ, ಮಾತನಾಡಿದರು. 'ನಮ್ಮೂರ ಶಾಲೆ, ನಮ್ಮೆಲ್ಲರ ಶಾಲೆ' ಎಂಬ ಅಭಿಮಾನ, ಮಕ್ಕಳಿಗಾಗಿ ತನು, ಮನ ಹಾಗೂ ಧನ ಸಹಾಯ, ಸರ್ಕಾರಿ ಶಾಲೆಯ ಮಕ್ಕಳ ಬದುಕನ್ನು ಬೆಳಗಲಿದೆ, ಎಂದರು.

<><><>

ಕಲಬುರಗಿ ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ, ಜಲ ಸಂರಕ್ಷಣೆಯ 10 ಮಾದರಿ ಹಳ್ಳಿಗಳನ್ನು ರೂಪಿಸಲು, ಜಿಲ್ಲಾ ಪಂಚಾಯಿತಿ, ಕನ್ಸೋರ್ಟಿಯಂ ಫಾರ್ ಡಿಯಾಟ್ಸ್ ಡಿಸೆಮಿನೇಷನ್ ಸಂಸ್ಥೆ ಜೊತೆ, ಒಪ್ಪಂದಕ್ಕೆ ಸಹಿ ಹಾಕಿದೆ. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರ ಉಪಸ್ಥಿತಿಯಲ್ಲಿ, ಜಿಲ್ಲಾ ಪಂಚಾಯಿತಿ ಸಿ.ಇ.ಓ ಭಂವರ್ ಸಿಂಗ್ ಮೀನಾ ಮತ್ತು ಸಿ.ಡಿ.ಡಿ. ಸಂಸ್ಥೆಯ ಅಧಿಕಾರಿ ಯೋಗೇಶ, ಒಪ್ಪಂದ ಪತ್ರ ವಿನಿಮಯಿಸಿಕೊಂಡರು. ಗ್ರಾಮಸ್ಥರ ಸಹಭಾಗಿತ್ವದಲ್ಲಿ, ಜಲಮೂಲಗಳ ಸಂರಕ್ಷಣೆ, ಮಳೆ ನೀರು ಸಂಗ್ರಹ, ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ, ತ್ಯಾಜ್ಯ ನೀರು ಸಂಸ್ಕರಣಾ ಘಟಕ ಸ್ಥಾಪನೆ ಮೊದಲಾದ ಉದ್ದೇಶಗಳನ್ನು, ಒಡಂಬಡಿಕೆ ಹೊಂದಿದೆ.

<><><>

ಯಾದಗಿರಿ ಜಿಲ್ಲೆಯ, ಯಾದಗಿರಿ, ಶಹಾಪುರ ಮತ್ತು ಸುರಪುರ ತಾಲೂಕುಗಳಲ್ಲಿ, ಕುಡಿಯುವ ನೀರಿನ ಸಮಸ್ಯೆ ನೀಗಿಸಲು, ಅವಶ್ಯಕ ಕ್ರಮ ಕೈಗೊಳ್ಳಲಾಗಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪುರ ತಿಳಿಸಿದ್ದಾರೆ. ಕೇಂದ್ರ ಪುರಸ್ಕೃತ ಅಮೃತ ಯೋಜನೆ, ಎರಡನೇ ಆವೃತ್ತಿ ಅಡಿ, 53 ಕೋಟಿ 16 ಲಕ್ಷ ರೂಪಾಯಿ ವೆಚ್ಚದಲ್ಲಿ, ಯಾದಗಿರಿ ನಗರದ, 31 ವಾರ್ಡ್‌ಗಳಿಗೆ ನಿರಂತರ ಕುಡಿಯುವ ನೀರು ಪೂರೈಸುವ, ಕಾಮಗಾರಿಗೆ, ಕಮಲಾ ನೆಹರು ಉದ್ಯಾನದಲ್ಲಿ, ಅವರು ಚಾಲನೆ ನೀಡಿದರು.

<><><>

ಬಹು ನಿರೀಕ್ಷಿತ, ಕೊಟ್ಟಲಗಿ ಹಾಗೂ ಕಕಮರಿ ಅಮ್ಮಾಜೇಶ್ವರಿ ಏತ ನೀರಾವರಿ ಯೋಜನೆಗೆ, ಝುಂಜರವಾಡ ಗ್ರಾಮದಲ್ಲಿ, ಜಾಕ್ ವೆಲ್ ಕಮ್ ಪಂಪ್ ಹೌಸ್ ನ ರಾಫ್ಟ್ ಕಾಮಗಾರಿಗೆ, ಶಾಸಕ ಲಕ್ಷ್ಮಣ ಸವದಿ ಅವರು, ಚಾಲನೆ ನೀಡಿದರು. ಬೆಳಗಾವಿ ಜಿಲ್ಲೆ, ಅಥಣಿ ತಾಲೂಕು ಪೂರ್ವ ಭಾಗದ, 75 ಸಾವಿರ ಎಕರೆಗಿಂತ ಹೆಚ್ಚು, ಕೃಷಿ ಜಮೀನಿಗೆ ನೀರಾವರಿ ಒದಗಿಸುವ, ಯೋಜನೆ ಇದಾಗಿದೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ಪ್ರಧಾನಮಂತ್ರಿ ಮುದ್ರಾ ಯೋಜನೆ ಜಾರಿಗೊಂಡು, ಈಗ 10 ವರ್ಷಗಳು. 32 ಲಕ್ಷ ಕೋಟಿ ರೂಪಾಯಿಗೂ ಹೆಚ್ಚು ಮೌಲ್ಯದ ಸಾಲವನ್ನು, 52 ಕೋಟಿ ಜನರಿಗೆ ಮಂಜೂರು ಮಾಡಲಾಗಿದೆ. ಮುದ್ರಾ ಯೋಜನೆ ಅಡಿ, ಮೂರು ವರ್ಷಗಳ ಅವಧಿಗೆ, ಸಾಲವನ್ನು ನೀಡಲಾಗುತ್ತದೆ. 50 ಸಾವಿರ ರೂಪಾಯಿ ವರೆಗೆ, ಶಿಶು ಸಾಲ ಯೋಜನೆ, 5 ಲಕ್ಷ ರೂಪಾಯಿ ವರೆಗೆ ಕಿಶೋರ ಸಾಲ ಮತ್ತು 10 ಲಕ್ಷ ರೂಪಾಯಿ ವರೆಗೆ, ತರುಣ ಸಾಲ ಎಂದು, ಮೂರು ವಿಭಾಗಗಳಲ್ಲಿ ಸಾಲ ಸೌಲಭ್ಯ ಯೋಜಿಸಲಾಗಿದೆ.

<><><>

ಪ್ರಧಾನಮಂತ್ರಿ ಮುದ್ರಾ ಸಾಲ ಯೋಜನೆಯ ಫಲಾನುಭವಿ, ಧಾರವಾಡದ ಕಿರಾಣಿ ವ್ಯಾಪಾರಿ ಬಿ.ಕೆ. ಸುರೇಶ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಬಿ.ಕೆ. ಸುರೇಶ ಧ್ವನಿ 30 ಸೆಕೆಂದುಗಳು

<><><>

ಕಳೆದ ಮಾರ್ಚ್ 1 ರಿಂದ, 20ರ ವರೆಗೆ ನಡೆದಿದ್ದ, ದ್ವಿತೀಯ ಪಿ.ಯು.ಸಿ. ಪರೀಕ್ಷೆ ಫಲಿತಾಂಶ, ಇಂದು ಪ್ರಕಟವಾಗಲಿದೆ. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಖಾತೆ ಸಚಿವ, ಮಧು ಬಂಗಾರಪ್ಪ ಅವರು, ಇಂದು ಮಧ್ಯಾಹ್ನ 12.30ಕ್ಕೆ ಫಲಿತಾಂಶ ಪ್ರಕಟಿಸಲಿದ್ದಾರೆ. ಇಂದು ಮಧ್ಯಾಹ್ನ 1.30ಕ್ಕೆ Kar results.nic.in ಅಥವಾ kseab.karnataka.gov.in ಜಾಲತಾಣದಲ್ಲಿ ಪಿ.ಯು.ಸಿ. ಫಲಿತಾಂಶ ಪ್ರಕಟವಾಗಲಿದೆ.

<><><>

ಮಕ್ಕಳ ಉತ್ತಮ ಗುಣಮಟ್ಟದ ಚಿಕಿತ್ಸೆಗೆ, ಬೀದರ ಜಿಲ್ಲೆ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ – 'ಬ್ರಿಮ್ಸ್' ಆಸ್ಪತ್ರೆಗೆ, ಕೇಂದ್ರ ಸರ್ಕಾರದ, 'ಮುಸ್ಕಾನ್' ರಾಷ್ಟ್ರೀಯ ಪ್ರಮಾಣ ಪತ್ರ ದೊರೆತಿದೆ ಎಂದು, ವೈದ್ಯಕೀಯ ಅಧೀಕ್ಷಕ ಡಾಕ್ಟರ್ ಶಿವಯೋಗಿ ಬಾಳಿ ತಿಳಿಸಿದ್ದಾರೆ. ಮುಸ್ಕಾನ್ ಮಹತ್ವಾಕಾಕ್ಷಿ ರಾಷ್ಟ್ರೀಯ ಕಾರ್ಯಕ್ರಮವಾಗಿದ್ದು, ನವಜಾತ ಶಿಶುವಿನಿಂದ, 12 ವರ್ಷದ ಮಕ್ಕಳ ವರೆಗೆ, ನಾಲ್ಕು ವಿಭಾಗಗಳಲ್ಲಿ ಚಿಕಿತ್ಸೆ ನೀಡುವ ಪ್ರಾವಧಾನವಿದೆ. ಬೀದರ ಜಿಲ್ಲಾ ಆಸ್ಪತ್ರೆಗೆ, ಶೇಕಡ 88 ದಶಾಂಶ 6–8 ಅಂಕಗಳು ದೊರೆತಿರುವುದು, ಆರೋಗ್ಯ ದಿನಾಚರಣೆ ಸಂದರ್ಭದಲ್ಲಿ ವಿಶೇಷ ಎಂದರು.

<><><>

ಮೊಣಕಾಲು ಕೀಲು, ಮರು ಜೋಡಣೆ ಶಸ್ತ್ರ ಚಿಕಿತ್ಸೆಯನ್ನು ಯಶಸ್ವಿಯಾಗಿ ಕೈಗೊಂಡ, ರಾಯಚೂರು ಜಿಲ್ಲೆ, ಸಿಂಧನೂರಿನ ತಾಲೂಕು ಸರ್ಕಾರಿ ಆಸ್ಪತ್ರೆ, ರಾಜ್ಯದ ಮೊದಲ ಆಸ್ಪತ್ರೆ ಎಂಬ ಹೆಗ್ಗಳಿಕೆಗೆ, ಆರೋಗ್ಯ ದಿನಾಚರಣೆ ಸಂದರ್ಭದಲ್ಲಿ ಪಾತ್ರವಾಗಿದೆ.

75 ವರ್ಷದ, ಗೊರೇಬಾಳ ಗ್ರಾಮದ ನಿವಾಸಿ, ಗಂಗಮ್ಮ ಅವರಿಗೆ, ದಿಲ್ಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ – ಏಮ್ಸ್ ನ ನುರಿತ ವೈದ್ಯರಾದ ಡಾಕ್ಟರ್ ವಿಜಯಕುಮಾರ ಮತ್ತು ಡಾಕ್ಟರ್ ತು ಾರ ನಾಯಕ ಮಾರ್ಗದರ್ಶನದಲ್ಲಿ, ಡಾಕ್ಟರ್ ಸಲಾವುದ್ದಿನ್ ಖಾಲಿದ್ ನೇತೃತ್ವದ ತಜ್ಞರ ತಂಡ, ಯಶಸ್ವಿಯಾಗಿ, ಸಿಂಧನೂರು ತಾಲೂಕು ಆಸ್ಪತ್ರೆಯಲ್ಲಿ ಮೊಣಕಾಲು ಶಸ್ತ್ರ ಚಿಕಿತ್ಸೆ ನೆರವೇರಿಸಿದೆ.

<><><>

ಧಾರವಾಡದ ಸತ್ತೂರಿನ, ಎಸ್.ಡಿ.ಎಂ. ನಾರಾಯಣ ಹೃದಯಾಲಯದ, ವ್ಯಾಸ್ಕ್ಯುಲರ್ ಚಿಕಿತ್ಸಾ ವಿಭಾಗ, ಕಾರ್ಯಾರಂಭಿಸಿದ ಕೇವಲ ಒಂದು ವ ದ ಅವಧಿಯಲ್ಲಿ, 250ಕ್ಕೂ ಹೆಚ್ಚು ಯಶಸ್ವಿ ಹೃದಯ ಶಸ್ತ್ರ ಚಿಕಿತ್ಸೆಗಳನ್ನು ನಡೆಸಿ, ಮಹತ್ವದ ಮೈಲುಗಲ್ಲು ಸಾಧಿಸಿದೆ. ವ್ಯಾಸ್ಕ್ಯುಲರ್ ಮತ್ತು ಎಂಡೋವ್ಯಾಸ್ಕ್ಯುರ್ ತಜ್ಞ ಡಾಕ್ಟರ್ ಬಸವರಾಜೇಂದ್ರ ಆನೂರ್‌ಶೆಟ್ರು, ವಿಶ್ವ ಆರೋಗ್ಯ ದಿನಾಚರಣೆ ಹಿನ್ನೆಲೆ, ಈ ವಿಷಯ ತಿಳಿಸಿ, ಹೃದಯದ ಆರೋಗ್ಯಾಕಾಂಕ್ಷಿಗಳಿಗೆ, ತಮ್ಮ ಊರಿನಲ್ಲೇ ಉತ್ತಮ ಗುಣಮಟ್ಟದ ಚಿಕಿತ್ಸೆ ಲಭ್ಯವಾಗಿಸುವ ಗುರಿ ಹಾಗೂ ಸಾಮಾಜಿಕ ಕಳಕಳಿಯೊಂದಿಗೆ, ವಿಶೇಷ ಚಿಕಿತ್ಸಾ ವಿಭಾಗ ಕಾರ್ಯನಿರ್ವಹಿಸುತ್ತಿದೆ ಎಂದರು.

<><><>

ಅಂತರ್ ಮಹಾವಿದ್ಯಾಲಯಗಳ, ವಲಯ ಮಟ್ಟದ, ಪ್ರಥಮ, ಪುರ ರ ಕಬಡ್ಡಿ ಪಂದ್ಯಾವಳಿ, ಇಂದಿನಿಂದ ಎರಡು ದಿನಗಳ ಕಾಲ, ಧಾರವಾಡದ ಭಾರತ್ ಹೈಸ್ಕೂಲ್ ಆವರಣದಲ್ಲಿ ನಡೆಯಲಿದೆ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಹಾಗೂ ಮರಾಠಾ ವಿದ್ಯಾ ಪ್ರಸಾರ ಮಂಡಳದ ಸಹಯೋಗದಲ್ಲಿ ಆಯೋಜಿತ, ಕಬಡ್ಡಿ ಪಂದ್ಯಾವಳಿಗೆ, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ ಚಾಲನೆ ನೀಡಲಿದ್ದಾರೆ. ವಿಧಾನಸಭೆ ವಿಪಕ್ಷ ಸಹ ನಾಯಕ ಅರವಿಂದ ಬೆಲ್ಲದ, ನೂತನವಾಗಿ ನಿರ್ಮಾಣಗೊಂಡ, ಕಬಡ್ಡಿ ಮೈದಾನವನ್ನು ಉದ್ಘಾಟಿಸಲಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಮನೆ ಬಳಕೆ ಅಡುಗೆ ಅನಿಲ ಸಿಲಿಂಡರ್ ಬೆಲೆಯನ್ನು ಕೇಂದ್ರ ಸರ್ಕಾರ 50 ರೂಪಾಯಿಗೆ ಹೆಚ್ಚಿಸಿದೆ. 14.2 ಕಿಲೋ ತೂಕದ ಎಲ್.ಪಿ.ಜಿ. ಸಿಲಿಂಡರ್ ಬೆಲೆ 853 ರೂಪಾಯಿ ಆಗಿದೆ. ಉಜ್ವಲಾ ಸಿಲಿಂಡರ್ ಬೆಲೆ 553 ಕ್ಕೆ ಏರಿಕೆಯಾಗಿದೆ. ಪರಿಷ್ಕೃತ ದರಗಳು, ಇಂದಿನಿಂದಲೇ ಜಾರಿಗೆ ಬರಲಿವೆ.

<><><>

ಸ್ವಾತಂತ್ರ್ಯ ಸೇನಾನಿ, ಮಂಗಲ್ ಪಾಂಡೆ ಅವರ ಪುಣ್ಯತಿಥಿ ಅಂಗವಾಗಿ, ಶ್ರದ್ಧಾಂಜಲಿ ಸಭೆಗಳು ಆಯೋಜಿತವಾಗಿವೆ.

<><><>

ಮಂಡ್ಯ ಜಿಲ್ಲೆ, ಪಾಂಡವಪುರ ತಾಲೂಕಿನ, ಮೇಲುಕೋಟೆ ಶ್ರೀ ಚಲುವನಾರಾಯಣಸ್ವಾಮಿ ವೈರಮುಡಿ ಉತ್ಸವ, ಭಕ್ತಾದಿಗಳ ಹರ್ಷೋದ್ಗಾರದ ಮಧ್ಯೆ ವಿಜೃಂಭಣೆಯಿಂದ ನೆರವೇರಿತು.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ, ಅಹಮದಾಬಾದ್ ನ ಸಬರಮತಿಯಲ್ಲಿ ಇಂದು ನಡೆಯಲಿರುವ, ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ, ನವ ಸತ್ಯಾಗ್ರಹ ಬೈಠಕ್ ನಲ್ಲಿ ಭಾಗವಹಿಸಲಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಇಂದಿನಿಂದ 15 ದಿನಗಳ ವರೆಗೆ, 'ಪೋಷಣ್ ಪಖ್ವಾಡಾ'; ರಾಜ್ಯಾದ್ಯಂತ ಆರೋಗ್ಯ ಜಾಗ್ರತಿ ಆಂದೋಲನ.
- ರಾಜ್ಯದ 215 ಕೈಗಾರಿಕಾ ಪ್ರದೇಶಗಳ ಮಾಲಿನ್ಯ ತಗ್ಗಿಸಲು, ಉನ್ನತ ಸಂಸ್ಥೆಗಳಿಂದ ವಿಸ್ತೃತ ಅಧ್ಯಯನ – ಎಂ.ಬಿ.ಪಾಟೀಲ.
- ಪ್ರಧಾನಮಂತ್ರಿ ಮುದ್ರಾ ಸಾಲ ಯೋಜನೆ ಜಾರಿಗೊಂಡು, 10 ವರ್ಷಗಳು ಪೂರ್ಣ.
- ಇಂದು ಮಧ್ಯಾಹ್ನ 12.30ಕ್ಕೆ, ದ್ವಿತೀಯ ಪಿ.ಯು.ಸಿ. ಫಲಿತಾಂಶ, ಪ್ರಕಟ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>